ಈ) ಬಾಕಿಯಿರುವ ಸಹಾಯಧನವನ್ನು ಬಿಡುಗಡೆ ಮಾಡುವ ದೃಷ್ಟಿಯಿಂದ 2007–08 ಸಾಲಿನ ಆಯವ್ಯಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನಕ್ಕೆಂದು ರೂ.75.00 ಕೋಟಿ ಒದಗಿಸಲಾಗಿದೆ.

1360 (1453) ಶ್ರೀ ನಿರಾಣಿ ಮುರಗೇಶ ರುದ್ರಪ್ಪ (ಬೀಳಗಿ) :– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆ ಬೀಳಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಕೆರೆಗಳು ಯಾವುವು;

ಆ) ಆ ಕೆರೆಗಳ ಪೈಕಿ ನೀರು ತುಂಬುವ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವ್ಯಾವವು;

ಇ)ಹೊಸ ಕೆರೆಗಳ ನಿರ್ಮಾಣ ಸರ್ಕಾರದ ಮುಂದೆ ಇದೆಯೇ;

ಈ) ಹಾಗಿದ್ದಲ್ಲಿ, ಕೆರೆ ನಿಮಾಣಕ್ಕಾಗಿ ರೈತರಿಂದ ವಶಪಡಿಸಿಕೊಳ್ಳಬಹುದಾದ ಜಮೀನಿಗೆ ಪರಿಹಾರ ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ;

ಉ) ಬೀಳಗಿ ಮತಕ್ಷೇತ್ರ ವ್ಯಾಪ್ತಿಯ ಜಮಖಂಡಿ ತಾಲ್ಲೂಕಿನ ಸಾವಳಗಿ ಭಾಗವು ಮಳೆ ಆಶ್ರಿತ ಪ್ರದೇಶವಾಗಿರುವುದರಿಂದ ಈ ಭಾಗದ ಕೆರೆಗಳ ಅಭಿವೃದ್ಧಿ ಹಾಗೂ ಹೊಸ ಕೆರೆಗಳ ನಿರ್ಮಾಣಕ್ಕೆ ಸರ್ಕಾರ ಯೋಚನೆ ಮಾಡುವುದೇ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು) :

ಅ) ಬಾಗಲಕೋಟೆ ಜಿಲ್ಲೆ ಬೀಳಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಕೆರೆಗಳು ಈ ಕೆಳಗಿನಂತಿವೆ:

1. ತೊದಲಬಾಗಿ ಕೆರೆ
2. ಕನ್ನೊಳ್ಳಿ ಕೆರೆ
3. ಗದ್ಯಾಳ ಕೆರೆ (ಹಳೆ)
4. ಕುರಗೋಡ ಕೆರೆ
5. ಖಾಜಿಬೀಳಗಿ ಕೆರೆ

6. ಗದ್ಯಾಳ ಕೆರೆ (ಹೊಸ)

7. ನಟಕಲ್ ಕೆರೆ

8. ಜಾನಮಟ್ಟಿ ಕೆರೆ

9. ಅರಕೇರಿ ಸೈಟ್ – 1 ಕೆರೆ ಹಾಗೂ

10. ಅರಕೇರಿ ಸೈಟ್ – 2 ಕೆರೆ

ಆ) ಈ ಪೈಕಿ ತೊದಲಬಾಗಿ ಕೆರೆ, ಕನ್ನೊಳ್ಳಿ ಕೆರೆ, ಗದ್ಯಾಳ ಕೆರೆ (ಹಳೆ), ಕುರಗೋಡ ಕೆರೆ, ಖಾಜಿಬೀಳಗಿ ಕೆರೆ, ಗದ್ಯಾಳ ಕೆರೆ (ಹೊಸ) ಹಾಗೂ ನಟಕಲ್ ಕೆರೆ, ಗದ್ಯಾಳ ಕೆರೆ (ಹೊಸ) ಹಾಗೂ ನಟಕಲ್ ಕೆರೆ ನೀರು ತುಂಬುವ ಯೋಜನೆಯಲ್ಲಿ ಬರುತ್ತವೆ.

ಇ) ಇದೆ.

ಈ) ಕೆರೆ ನಿರ್ಮಾಣಕ್ಕಾಗಿ ರೈತರಿಂದ ವಶಪಡಿಸಿಕೊಳ್ಳಬಹುದಾದ ಜಮೀನಿಗೆ ನಿಯಮಾನುಸಾರ ಪರಿಹಾರ ನೀಡಲಾಗುವುದು.

ಉ) ಕೆರೆಗಳ ಅಭಿವೃದ್ಧಿಯನ್ನು ಅನುದಾನದ ಲಭ್ಯತೆಗೆ ಅನುಸಾರವಾಗಿ ಕೈಗೊಳ್ಳಲಾಗುವುದು. ಹೊಸ ಕೆರೆಗಳ ನಿರ್ಮಾಣಕ್ಕಾಗಿ ಸಮೀಕ್ಷೆ ಕೈಗೊಂಡು ತಾಂತ್ರಿಕ ಶಕ್ಯತೆ ಹಾಗೂ ಆರ್ಥಿಕ ಸಮಕ್ಷತೆಯನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು.

1361 (1884) ಶ್ರೀಮತಿ ಪರಿಮಳ ಕೆ.ಎಸ್ (ಹನೂರು) :– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹನೂರು ವಿಧಾನ ಸಭಾ ಕ್ಷೇತ್ರದ ಕಾಡಂಚಿನಲ್ಲಿರುವ ಗೋಪಿನಾಥಂ, ನೆಲ್ಲಿಕತ್ರಿ, ಜಾಬುಟೆಪಟ್ಟಿ, ಮಾರಿಕೊಟ್ಟಾಯಂ ಮುಂತಾದ ಹಳ್ಳಿಗಳಿಗೆ ರಸ್ತೆ, ಕುಡಿಯುವ ನೀರಿನ ಕೊಳವೆ ಬಾವಿ, ಶಾಲಾ ಕಟ್ಟಡ ಇನ್ನೂ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅರಣ್ಯ ಇಲಾಖೆ ಜಾಗ ನೀಡದೇ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಡಂಚಿನ ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅರಣ್ಯ ಇಲಾಖೆಯಿಂದ ಜಾಗ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?